

# ಮಕ್ಕಳ ವ್ಯಕ್ತಿತ್ವ ಇರಲಿ ಸ್ವಾತಂತ್ರ್ಯ

■ **ಮಂಜುಳಾರಾಜ್**

ಸೀಮಾಗೆ ಮೊದಲಿನಿಂದಲೂ ಸಾಹಿತ್ಯದಲ್ಲಿ ಆಸಕ್ತಿ, ಅವಳು ಹತ್ತನೆಯ ತರಗತಿ ಪಾಸಾದ ನಂತರ ಆರ್ಟ್ಸ್ ತೆಗೆದುಕೊಳ್ಳುತ್ತೇನೆಂದರೆ ಅವರ ತಾಯಿಗೆ ಅಳುವೇ ಬಂದಿತು. ಚುರುಕಾಗಿರುವ ಮಗಳು ಡಾಕ್ಟರ್ ಅಥವಾ ಇಂಜಿನಿಯರ್ ಆಗಲಿ ಎನ್ನುವ ಆಸೆ ತಾಯಿಯದ್ದು. ತಾನು ವೈದ್ಯಳಾಗುವ ಕನಸಿತ್ತು, ಆದರೆ ಅದು ನೆರವೇರಲಿಲ್ಲ; ಮಗಳ ಮೂಲಕವಾದರೂ ಅದನ್ನು ಈಡೇರಿಸಿಕೊಳ್ಳುವ ಆಸೆ. ಆದರೆ ಮಗಳಿಗೆ ಸಾಹಿತ್ಯದಲ್ಲಿ ಆಸಕ್ತಿ. 'ಎಂತಹವರೂ ಈಗ ಎಂಜಿನಿಯರ್ ಅಥವಾ ಡಾಕ್ಟರ್ ಆಗುವಾಗ ನಿನಗೇಕೆ ಈ ಬುದ್ಧಿ ಬಂತು' ಎಂದು ಅತ್ತು ಕರೆದು ಬಲವಂತ ಮಾಡಿ ವಿಜ್ಞಾನ ವಿಭಾಗಕ್ಕೆ ಕಳುಹಿಸಿದರು.

ಚುರುಕಾಗಿದ್ದ ಹುಡುಗಿ ಪಿಯುಸಿಯಲ್ಲಿ ಪಾಸಾಗಲೇ ಇಲ್ಲ. ಅವಳ ಒಂದು ವರ್ಷ ವ್ಯರ್ಥವಾಗಿ ಹೋಯಿತು. ತಾಯಿ– ಮಗಳಿಬ್ಬರಿಗೂ ಜೀವನದಲ್ಲಿ ಮರೆಯಲಾರದ ಪೆಟ್ಟು. ಪಾಪ, ಅವಳಿಗೆ ಆಸಕ್ತಿ ಇದ್ದ ಕಲಾ ವಿಭಾಗಕ್ಕೆ ಕಳುಹಿಸಿದ್ದರೆ ಪಾಸಾಗುತ್ತಿದ್ದಳೇನೋ ಎಂದು ಈಗಲೂ ತಾಯಿ ಕೊರಗುತ್ತಾಳೆ. ಮಗಳಿಗೆ ತಾಯಿ ಮೇಲೆ ಬೇಸರ. ಮಾತನಾಡುವಾಗ ಸ್ವಾತಂತ್ರ್ಯದ ಕಹಳೆ ಊದುವ ನಾವು ವೈಯುಕ್ತಿಕ ಜೀವನದ ವಿಷಯಕ್ಕೆ ಬಂದಾಗ ತಾಳುವ ಧೋರಣೆಯೇ ಬೇರೆಯಾಗುತ್ತದೆ. ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ಬಿಡಿ, ಚಿಕ್ಕಂದಿನಿಂದಲೂ ಮಕ್ಕಳ ಮನದಲ್ಲೇನಿದೆಯೆಂದು ತಿಳಿದುಕೊಳ್ಳುವ ಮನೋಭಾವವನ್ನೇ ಪೋಷಕರು ಹೊಂದಿರುವುದಿಲ್ಲ.

**ಮಕ್ಕಳಿಗೆ ಸ್ವಾತಂತ್ರ್ಯ ಬೇಕೆ?**

ಮಕ್ಕಳು ಓದುವುದನ್ನು ಬಿಟ್ಟು ಮತ್ತೇನನ್ನು ಮಾಡುತ್ತೇನೆಂದರೂ ಅದು ವ್ಯರ್ಥ ಎನ್ನುವ ಭಾವನೆ, ಮಾಡುವ ಎಲ್ಲ ಕೆಲಸಗಳೂ ಮುಂದೆ ಪ್ರಯೋಜನವಾಗಬೇಕೆನ್ನುವ ದೂರಾಲೋಚನೆ. ಬಹಳಷ್ಟು ಬಾರಿ ಅವರ ಮನದಲ್ಲಿ ಏನಿದೆಯೆಂದು ತಿಳಿದುಕೊಳ್ಳುವ ಕಷ್ಟಕ್ಕೇ ಪೋಷಕರು ಹೋಗುವುದಿಲ್ಲ. ಮಕ್ಕಳ ಮೇಲಿನ ಅತಿಯಾದ ಪ್ರೇಮದಿಂದ ಅವರನ್ನು ಓವರ್ ಪ್ರೊಟೆಕ್ಟಿವ್ ಮಾಡಿಬಿಡುತ್ತಾರೆ. ಅವರಂತೆ ಅರಳಲು ಬಿಡುವುದಿಲ್ಲ. ಈಗ ಎಲ್ಲರ ಬಾಯಲ್ಲೂ ನಲಿದಾಡುತ್ತಿರುವವರ ಪದ– ಸ್ವಾತಂತ್ರ್ಯ! ಪಶು ಪಕ್ಷಿ ಮಾತ್ರವಲ್ಲ, ಹುಟ್ಟಿದ ಎಲ್ಲ ಜೀವಿಗಳೂ ಮುಕ್ತವಾಗಿರಬೇಕು. ಮನದಾಳದ ಮಾತನಾಡಲು, ಅನ್ನಿಸಿದ್ದನ್ನು ಮಾಡಲು, ಬರೆಯಲು ಎಲ್ಲಕ್ಕೂ ಸ್ವಾತಂತ್ರ್ಯ ಬೇಕು ಎನ್ನುವ ಧ್ವನಿ ಎಲ್ಲೆಲ್ಲೂ ಮೊಳಗುತ್ತಲೇ ಇರುತ್ತದೆ. ಅದೇ ಈಗಿನ ಟ್ರೆಂಡ್! ಆದರೆ ಮಕ್ಕಳನ್ನು ಮಾತ್ರ ನಾವು ನಮ್ಮ ಹಿಡಿತದಲ್ಲಿಟ್ಟುಕೊಳ್ಳ ಬಯಸುತ್ತೇವೆ. ನಾವು ಆಸೆ ಪಟ್ಟದ್ದನ್ನು ಕಲಿಯಬೇಕು, ಹೇಳಿದಂತೆ ನಡೆ ನುಡಿ ಅನುಸರಿಸಬೇಕು. ಅಪ್ಪ–ಅಮ್ಮ ಬಯಸಿದ ಕೋರ್ಸ್‌ಗೇ ಹೋಗಬೇಕು. ಪ್ರಶ್ನಿಸಿದರೆ ಚೌಕಾಶಿ ಶುರು. 'ಅವರಿಗೇನು ಗೊತ್ತಾಗುತ್ತೆ, ಅವರಿನ್ನೂ ಚಿಕ್ಕವರು. ಭವಿಷ್ಯದ ನಿರ್ಧಾರ ತೆಗೆದುಕೊಳ್ಳೋಕೆ ಅವರಿಗೆ ಆಗುತ್ತಾ? ನಿರ್ಧಾರ ತೆಗೆದುಕೊಳ್ಳೋಕೆ ಬಿಟ್ರೆ, ಅವರ ಜೀವನ ಹಾಳಾಗಿ ಬಿಡೋಲ್ವೇ' ಎನ್ನುವುದು ಹೆತ್ತವರ ಭಯ– ಆತಂಕ. ಹೀಗಾಗಿ ಮಕ್ಕಳ ಭವಿಷ್ಯದ ನಿರ್ಧಾರಗಳನ್ನು ತಂದೆ ತಾಯಂದಿರೇ ತೆಗೆದುಕೊಳ್ಳುತ್ತಾರೆ.

**ಸ್ವಾತಂತ್ರ್ಯ ಹೇಗಿರಬೇಕು?**

ಇದೇ ರೀತಿ ಚಿಕ್ಕಂದಿನಲ್ಲೂ ಸಹ ಮಕ್ಕಳಿಗೆ ಮುಕ್ತ ವಾತಾವರಣ ಕಲ್ಪಿಸುವ ಸ್ವಾತಂತ್ರ್ಯದ ಅಗತ್ಯವಿದೆ. ಅರಿಯದ ಕಂದಮ್ಮಗಳಿಗೆ ಕಡಿವಾಣ ಹಾಕದಿದ್ದರೆ ಹೇಗೆ ಎನ್ನುವ ಹೆತ್ತವರ ಭಾವನೆ ಸಹಜವೇ. ಮಕ್ಕಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದಲ್ಲ; ಅಲ್ಲೊಂದು ಮಿತಿ ಇದ್ದೇ ಇರುತ್ತದೆ ಎನ್ನುವುದನ್ನು ಪೋಷಕರು ಮರೆಯಬಾರದು. ಅದೂ ಸಹಾ ವೈಜ್ಞಾನಿಕ ದೃಷ್ಟಿಕೋನದಿಂದಲೇ. ಏಕೆಂದರೆ ಸ್ವಾತಂತ್ರ್ಯ ಎನ್ನುವುದು ಮಾನವನಿಗೆ ಹುಟ್ಟಿನಿಂದಲೇ ಬಂದಿರುವ ಹಕ್ಕು. ಅದರಲ್ಲೂ ಮಗುವಿಗೆ ಆಂತರಿಕವಾಗಿ ಮುನ್ನಡೆಯುವ ದಿಕ್ಸೂಚಿ ಇರುತ್ತದೆ. ಅದರ ಮುನ್ನಡೆಗೆ ಮುಕ್ತ ವಾತಾವರಣ ಬೇಕು, ಅಂತಹ ಪರಿಸರದ ಮಾಂಟೆಸ್ಸೊರಿ ಶಾಲೆಗಳನ್ನು ಗಮನಿಸಿದಾಗ ಅಲ್ಲಿ ಶಿಸ್ತಿರುತ್ತದೆ, ಶಾಂತವಾಗಿಯೂ ಇರುತ್ತದೆ. ಸ್ವಾತಂತ್ರ್ಯವಿದ್ದ ಮಾತ್ರಕ್ಕೆ ಗಲಾಟೆ ಇರಬೇಕೆಂದೇನಿಲ್ಲ. ನಾವು ಮಕ್ಕಳನ್ನು ಅತಿಯಾಗಿ ಕಟ್ಟುಪಾಡಿನಲ್ಲಿ ಇರಿಸಿದಾಗ ಅವರ ಮೇಲೆ ಸದಾ ನಿಗಾ ಇಡಬೇಕಾಗುತ್ತದೆ. ಆದರೆ ಸ್ವಾತಂತ್ರ್ಯ ಅವರಲ್ಲಿ ಶಿಸ್ತಿನ ಜೊತೆ ಜವಾಬ್ದಾರಿಯನ್ನೂ ಕಲಿಸುತ್ತದೆ.

ಮಕ್ಕಳನ್ನು ಒಂದೆಡೆ ಕೂರಿಸುವುದು ಶಿಕ್ಷಣ ನೀಡುವ ವಿಧಾನವಲ್ಲ. ಮಕ್ಕಳು ಓಡಾಡಬೇಕು. ಭಿನ್ನ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು, ಮಾತನಾಡಲು, ಕೆಲಸ ಮಾಡಲು ಮತ್ತು ಪ್ರಶ್ನೆ ಕೇಳಲು ನಿರಾಳವಾದ ಪರಿಸರವಿದ್ದಾಗ ಅವರ ಮುಗ್ಧ ಮನ ವಿಕಸಿತವಾಗುತ್ತದೆ. ಆಸಕ್ತಿಯುತ ಪರಿಕರಗಳೊಡನೆ ಆಟ, ಕುತೂಹಲ ಮೂಡಿಸುವ ಚಟುವಟಿಕೆಗಳು ಅವರಲ್ಲಿ ಸಂತೃಪ್ತಿಯನ್ನು ಮೂಡಿಸುತ್ತದೆ. ನಿರ್ಭಯ, ಮುಕ್ತ ಪರಿಸರದಲ್ಲಿ ಮಕ್ಕಳ ಆಂತರ್ಯ ಹೊರ ಹೊಮ್ಮುತ್ತದೆ.

ಬೂದಿ ಮುಚ್ಚಿದ ಕೆಂಡದಂತಿರುವ ಅವರಲ್ಲಿನ ಸುಪ್ತ ಪ್ರತಿಭೆ ಅರಳಲು ಪ್ರೇರೇಪಣೆ ದೊರೆಯುತ್ತದೆ. ಮಕ್ಕಳ ವ್ಯಕ್ತಿತ್ವದ ಸಂಪೂರ್ಣ ವಿಕಸನಕ್ಕೆ ಕಟ್ಟುಪಾಡುಗಳಿಗಿಂತಲೂ ಮಿತಿಯನ್ನು ಅರಿತ ಸ್ವಾತಂತ್ರ್ಯ ಹೆಚ್ಚು ಅನುಕೂಲಕರ. ●